೧. ಶ್ರೀ ಕೆ. ಜಿ. ಜಗದೀಶ್ ಒಡೆಯರ್

ಅ) ೨೬-೪-೮೮ರಿಂದ ೧೫-೫-೮೮ರವರೆಗೆ ಪ್ರತಿ ಗುಂಟೆಗೆ ತಿಂಗಳಿಗೆ ರೂ. ೫ ರಂತೆ, ಹಾಗೂ ೧೬-೫-೮೮ ರಿಂದ ೫-೧೦-೮೮ರವರೆಗೆ ಪ್ರತಿ ಗುಂಟೆಗೆ ತಿಂಗಳಿಗೆ ರೂ. ೨೦೦ ರಂತೆ

೨. ಶ್ರೀ ಎಂ. ಎಂ. ಕರೀಂ

೫-೧೦-೮೭ ರಿಂದ ೧೫-೫-೮೮ ರವರೆಗೆ. ಪ್ರತಿ ಗುಂಟೆಗೆ ತಿಂಗಳಿಗೆ ರೂ. ೫ ರಂತೆ ಹಾಗೂ ೧೬-೫-೮೮ ರಿಂದ ೧೫-೯-೮೮ರವರೆಗೆ ಪ್ರತಿ ಗುಂಟೆಗೆ ತಿಂಗಳಿಗೆ ರೂ. ೨೦೦ ರಂತೆ.

ವರಾಹಿ ಅರಣ್ಯ ವೃತ್ತದ ಮರಡಿ ರೇಂಜ್‌ನ ಕೂಪ್ ನಂಬರ್ ೧೪೭೭ರ ಕಂಠಿತ

೩೩೭ (೭೧೧) ಶ್ರೀ ಜಿ. ರಾಜಗೌಡ (ಹನೂರು).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ವರಾಹಿ ಅರಣ್ಯ ವೃತ್ತವಲ್ಲಿರುವ ವರಾಹಿ ಅರಣ್ಯ ಸಂಸ್ಕರಣಾ ವಿಭಾಗದ ಮರಡಿ ರೇಂಜಿನ ಕೂಪ್ ನಂಬರ್ ೧೪೭೭ರ ಗುತ್ತಿಗೆದಾರರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಪಡೆಯಲು ಇಲಾಖಾ ವತಿಯಿಂದ ಗುತ್ತಿಗೆದಾರರ ಪರವಾಗಿ ಹೈಪಾತಿಕೇಶನ್ ನೀಡಲಾಗಿದೆಯೆ ?

ಆ) ನೀಡಲಾಗಿದ್ದಲ್ಲಿ ನೀಡಲಾದ ತಾರೀಖು ಮತ್ತು ಹೈಪಾತಿಕೇಶನ್ ಪಡೆದ ಬ್ಯಾಂಕುಗಳ ವಿವರವನ್ನೊದಗಿಸುವುದು ?

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಅ) ನೀಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶಿಕ್ಷಣ ಶಾಲೆಗಳನ್ನು ನಡೆಸಲು ಅನುಮತಿ ಕೋರಿರುವ ಪ್ರಸ್ತಾವನೆಗಳು

೩೩೭ (೭೧೮) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ೧೯೮೮-೮೯ನೇ ಸಾಲಿನಲ್ಲಿ ಆಂಗ್ಲ ಪ್ರಾಥಮಿಕ ಶಾಲೆಗಳನ್ನು ನಡೆಸಲು ಅನುಮತಿ ಕೋರಿ ಸರ್ಕಾರಕ್ಕೆ ಎಷ್ಟು ಪ್ರಸ್ತಾವನೆಗಳು ಬಂದಿವೆ ?

ಆ) ಈ ಪೈಕಿ ಎಷ್ಟು ಶಾಲೆಗಳಿಗೆ ಅನುಮತಿ ನೀಡಲಾಗಿದೆ.

ಇ) ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳ ಬಗ್ಗೆ ರಾಜ್ಯದ ಶ್ರೇಷ್ಠ ನ್ಯಾಯಾಲಯ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರದ ನಿಲುವೇನು?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ೧೦೭

ಆ) ೧೦

ಇ) ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಸರ್ಕಾರವು ಮೇಲ್ಮನವಿಯನ್ನು ಶ್ರೇಷ್ಠ ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅದು ಇನ್ನು ಇತ್ಯರ್ಥವಾಗಿದೆ ಉಳಿದಿದೆ.